**ಸಾಕ್ಷಿಗೆ ದಿನಾಂಕಃ02-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. CSS ವಕೀಲರಿಂದ ::**

ನಾನು ಮೂಲತಃ ಅಜ್ಜಂಪುರ ತಾಲ್ಲೂಕಿನವನಾಗಿರುತ್ತೇನೆ ಎಂದರೆ ಸರಿ. ನನಗೆ ರಂಗಣ್ಣ ಯಾನೆ ಶಿವನಿ ರಂಗಣ್ಣ ಯಾರು ಎಂದು ತಿಳಿದಿರುವುದಿಲ್ಲ. ನನಗೆ ನಮ್ಮ ಗ್ರಾಮದ ಹನುಮಂತಪ್ಪ ಹಾಗೂ ಅವರ ಮಕ್ಕಳು ಯಾರು ಎಂದು ತಿಳಿದಿರುವುದಿಲ್ಲ. ಮೃತವಾದಿಯನ್ನು ನಾನು ನೋಡಿರುತ್ತೇನೆ. ಮೃತ ವಾದಿಯ ತಂದೆಯ ಹೆಸರು ಗವಿಯಪ್ಪ ಎಂದರೆ ನನಗೆ ಗೊತ್ತಿಲ್ಲ. ಸದರಿ ಗವಿಯಪ್ಪ ರವರಿಗೆ ಹನುಮಂತಪ್ಪ ಎಂಬ ಅಣ್ಣ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಗವಿಯಪ್ಪ ಮತ್ತು ಹನುಮಂತಪ್ಪ ರವರು ಮೇಲೆ ಹೇಳಿದ ಶಿವನಿ ರಂಗಣ್ಣ ರವರ ಮಕ್ಕಳಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳನ್ನು ಕಂದಾಯ ದಾಖಲಾತಿಗಳ ಆಧಾರದಲ್ಲಿ ಬರೆಸಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತು ಮೊದಲು ರಂಗಣ್ಣ ಬಿನ್ ರಾಮಣ್ಣ ರವರಿಗೆ ಸೇರಿದ್ದು ನಂತರದಲ್ಲಿ ಅದು ಹನುಮಣ್ಣ ರವರಿಗೆ ಸೇರಿರುತ್ತದೆ ಎಂದು ನಾನು ತಕರಾರಿನಲ್ಲಿ ಹೇಳಿದ್ದು ಸದರಿ ಹನುಮಣ್ಣ ರವರನ್ನು ನಾನು ನೋಡಿರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ಮೂಲತಃ ರಂಗಣ್ಣ ರವರಿಗೆ ಸೇರಿದ ಸ್ವತ್ತಾಗಿದ್ದು ಸದರಿಯವರ ತಂದೆಯ ಹೆಸರು ರಾಮಣ್ಣ ಅಲ್ಲ ತಿಮ್ಮಣ್ಣ ಆಗಿದ್ದು ಸದರಿಯವರು ಮೃತವಾದಿಯ ಅಜ್ಜ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ಸದರಿಯವರ ಮರಣ ನಂತರ ಹನುಮಣ್ಣ ರವರಿಗೆ ಆಸ್ತಿ ಬಂದಿರುತ್ತದೆ ಎಂದು ಹೇಳಿದ್ದು ಆದರೆ ಅದು ಹನುಮಂತಪ್ಪ ರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

ನಿಡಿ9 ರಿಂದ 12 ಕ್ರಯಪತ್ರಗಳು ಆದ ಸಮಯದಲ್ಲಿ ನಾನು ಇನ್ನು ಹುಟ್ಟಿರುವುದಿಲ್ಲ. ಸದರಿ ಕ್ರಯಪತ್ರಗಳನ್ನು ನಾನು ತಕ್ಕಮಟ್ಟಿಗೆ ಓದಿ ತಿಳಿದುಕೊಂಡಿರುತ್ತೇನೆ ಆದರೆ ಅದರಲ್ಲಿ ಇರುವ ಸಂಪೂರ್ಣ ವಿಚಾರ ನನಗೆ ಗೊತ್ತಿಲ್ಲ. ನಿಡಿ9 ರಿಂದ 12 ಕ್ರಯಪತ್ರಗಳಲ್ಲಿ ಗಂಗಾಧರಪ್ಪ ಅಥವಾ ಅವರ ತಂದೆ ಗವಿಯಪ್ಪ ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪ ರವರಿಗೆ ದಾವಾ ಶೆಡ್ಯೂಲ್ ಸ್ವತ್ತನ್ನು ಮಹಾಲಿಂಗಪ್ಪ ರವರಿಗೆ ಮಾರಾಟ ಮಾಡುವ ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಅದೇ ರೀತಿ ಮಹಾಲಿಂಗಪ್ಪ ರವರು ಸಿದ್ದರಾಮಪ್ಪ ರವರಿಗೆ ದಾವಾ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ

ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳು ಅನ್ಯಕ್ರಾಂತ ಆದ ಸಮಯದಲ್ಲಿ ಗಂಗಾಧರಪ್ಪ ರವರ ಅನುಮತಿ ಪಡೆಯಲಾಗಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಬರೆದಿರುವ ವಿಭಾಗದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅದರ ನಂತರದಲ್ಲಿ ಆಗಿರುವ ಬೇರೆ ದಾಖಲಾತಿಗಳ ಬಗ್ಗೆ ಮಾಹಿತಿ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅಜ್ಜ 1963 ರಲ್ಲಿ ಕ್ರಯಪತ್ರದ ಅಡಿ ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ಮಾಹಿತಿ ಇದ್ದು ಬೇರೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜನ ಹೆಸರು ಸಿದ್ದರಾಮಯ್ಯ ಆಗಿರುತ್ತದೆ. ನನ್ನ ಅಜ್ಜ ಸಿದ್ದರಾಮಯ್ಯ ರವರಿಗೆ ದಾವಾ ಶೆಡ್ಯೂಲ್ ಸ್ವತ್ತುಗಳ ಮೇಲೆ ಸಂಪೂರ್ಣ ಅಧಿಕಾರ ಇಲ್ಲದ ಕಾರಣ ನಾನು ಹೇಳುತ್ತಿರುವಂತೆ ಅವರು ಯಾವುದೇ ವಿಭಾಗ ಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಮೃತ ವಾದಿ ಮತ್ತು ಅವರ ಕುಟುಂಬದವರಿಗೆ ಅರ್ಧಂಶಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ತಪ್ಪಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: